# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಸತೀಶ ಕೆ.ಜೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಜುಟ್ಟನಹಳ್ಳಿ ಗ್ರಾಮ ಪಂಚಾಯಿತಿ, ಶ್ರವಣಬೆಳಗೋಳ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ ಇವರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:ಕಂಪ್ಲೇಂಟ್/ಉಪಲೋಕ್/ಎಂವೈಎಸ್/8633/2015/ಡಿಆರ್‌ಇ-5 ದಿನಾಂಕ: 18-01-2018.

**ಪ್ರಸ್ತಾವನೆ:**

ಈ ಪ್ರಕರಣದಲ್ಲಿ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತ ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ ಪ್ರಕರಣ 12(3) ಮತ್ತು 12(4)ರ ಅಡಿಯಲ್ಲಿ ಸಲ್ಲಿಸಿರುವ ವರದಿಯಲ್ಲಿ, ಶ್ರೀ. ನರಸಿಂಹಮೂರ್ತಿ ತಂದೆ ಮುನಿಸ್ವಾಮಿ, ವಾಸ ಪೂವಡಿಹಳ್ಳಿ ಗ್ರಾಮ, ಜುಟ್ಟನಹಳ್ಳಿ ಅಂಚೆ, ಶ್ರವಣಬೆಳಗೊಳ ಹೋಬಳಿ, ಚೆನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ.ಸತೀಶ ಕೆ.ಜೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಜುಟ್ಟನಹಳ್ಳಿ ಗ್ರಾಮ ಪಮಚಾಯಿತಿ, ಶ್ರವಣಬೆಳಗೋಳ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಲೋಕಾಯುಕ್ತಕ್ಕೆ ದೂರು ದಾಖಲಿಸಿದ್ದು, ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

**ದೂರಿನ ಸಂಕ್ಷಿಪ್ತ ವಿವರ :**

ಜುಟ್ಟನಹಳ್ಳಿ ಗ್ರಾಮ ಪಮಚಾಯಿತಿಯ ನಿಧಿ-2ರಲ್ಲಿ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದು 13ನೇ ಹಣಕಾಸಿನ ಯೋಜನೆಯ ಹಣವನ್ನು ಸಹ ಎದುರುದಾರರು ದುರುಪಯೋಗ ಪಡಿಸಿಕೊಂಡಿದ್ದಾರೆ. ಖಾತೆ ಮಾಡಲು ಹಣ ಕೇಳುತ್ತಾರೆ. ಲಂಚ ಕೊಡದೇ ಇದ್ದರೆ ಏನೂ ಕೆಲಸ ಮಾಡುವುದಿಲ್ಲ ಆದ್ದರಿಂದ ಇವರ ಮೇಲೆ ಕ್ರಮ ಜರುಗಿಸಿ ಬೇರೆಯವರನ್ನು ಈ ಗ್ರಾಮ ಪಂಚಾಯಿತಿಗೆ ನೇಮಿಸಿಕೊಡಬೇಕೆಂದು ಕೇಳಿಕೊಂಡಿದ್ದಾರೆ. ದೂರಿನಲ್ಲಿ ಕೆಲವು ಚೆಕ್ ಸಂಖ್ಯೆ ಮತ್ತು ಅದನ್ನು ಪಡೆದ ಕೆಲವರ ಹೆಸರುಗಳನ್ನು ನಮೂದಿಸಿದ್ದಾರೆ ಅಂತ ಆಪಾದಿಸಿದ್ದಾರೆ.

ದೂರುದಾರರು ಸಲ್ಲಿಸಿರುವ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಮ್ಮ ಪತ್ರನ್ವಯ ಆರೋಪಿಸಿರುವ ಪ್ರತಿ ಚೆಕ್‌ವಾರು ಮಾಡಲಾಗಿರುವ ಖರ್ಚಿನ ವಿವರಗಳನ್ನು ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. 13ನೇ ಹಣಕಾಸು ಯೋಜನೆಯ ಹಣವನ್ನು ಮಾರ್ಗಸೂಚಿಯಂತೆ ಕ್ರಿಯಾ ಯೋಜನೆ ತಯಾರಿಸಿ ಜಿಲ್ಲಾ ಪಂಚಾಯತಿಯಿಂದ ಕ್ರಿಯಾ ಯೋಜನೆಗೆ ಅನುಮೋದನೆ ಪಡೆದ ನಂತರ ಹಣ ಖರ್ಚು ಮಾಡಲಾಗಿದೆ.

ಅನುಮೋದಿತ ಕ್ರಿಯಾ ಯೋಜನೆಯ 2014-15ನೇ ಸಾಲಿನಲ್ಲಿ ಲೆಕ್ಕ ಪರಿಶೋಧನೆ ಮತ್ತು ಜಮಾಬಂದಿ ನಕಲುಗಳನ್ನು ಅವಗಾಹನೆಗೆ ಸಲ್ಲಿಸಲಾಗಿದೆ ಅಂತ ತಿಳಿಸಿದ್ದು ದೂರುದಾರರು ಕೇವಲ ದುರುದ್ದೇಶದಿಂದ ಅರ್ಜಿ ಸಲ್ಲಿಸಿದ್ದಾರೆ. ಖಾತೆ ಮಾಡಲು ಹಣ ಪಡೆಯುತ್ತಾರೆ. ಅಂತ ದೂರಿರುವುದು ತಪ್ಪು ತಿಳುವಳಿಕೆಯಾಗಿದೆ. ಗ್ರಾಮ ಠಾಣಾದ ವ್ಯಾಪ್ತಿಯಲ್ಲಿ ಸದರಿ ಸ್ವತ್ತು ಬಂದರೆ ಮಾತ್ರ ಆನ್‌ಲೈನ್ ಮುಖಾಂತರ ಮೋಜಣಿ ಇಲಾಖೆಗೆ ವರ್ಗಾವಣೆ ಮಾಡಲಾಗುತ್ತದೆ. ಇ-ಸ್ವತ್ತಿನ ಅಡಿಯಲ್ಲಿ ಎಲ್ಲಾ ಪ್ರಕ್ರಿಯೆಗಳು ನಡೆಯುವುದರಿಂದ ದೂರುದಾರರು ಸಲ್ಲಿಸಿರುವ ದೂರಿನಲ್ಲಿ ಯಾವುದೇ ಸತ್ಯಾಂಶವಿಲ್ಲ ಆದ್ದರಿಂದ ದೂರನ್ನು ವಜಾ ಮಾಡಲು ಕೋರಿಕೊಂಡಿದ್ದಾರೆ.

ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗಳ ಮೇಲೆ ದೂರುದಾರರ ಪ್ರತ್ಯುತ್ತರ ಕೇಳಲಾಗಿದೆ.

ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಪಂಚಾಯತಿಯ ತಾತ್ಕಾಲಿಕ ನೀರು ಗಂಟಿ ನವೀನ್ ರವರ ವೇತನ ಪಾವತಿ, ಆಂಟಿ ವೈರಸ್ ಹಾಕಿಸಿದ ಹಣ, ಪೆನ್ ಡ್ರೈವ್, ಮೂರು ಪ್ರಿಂಟರ್ ತುಂಬಿಸಿದ ಹಣ ಎಲ್ಲವನ್ನು ಒಂದೇ ಚೆಕ್‌ನಲ್ಲಿ ಪುಟ್ಟೇಗೌಡ ಅಟೆಂಡರ್ ಇವರ ಹೆಸರಿನಲ್ಲಿ ಕೊಡಲಾಗಿದೆ. ಪ್ರತಿ ದಿನ ರಾಷ್ಟ್ರಧ್ವಜ ಏರಿಸಲು ಮತ್ತು ಇಳಿಸಲು ಗೌರವಧನ ಅಂತ ಪುಟ್ಟೇಗೌಡ ಇವರಿಗೆ ರೂ5400/-ಗಳ ಚೆಕ್ ಕೊಟ್ಟಿದ್ದು ಇವರು ಯಾವ ರಾಷ್ಟ್ರ ಧ್ವಜ ಏರಿಸುವ ಕರ್ತವ್ಯ ಮಾಡಿಲ್ಲ ಇದೇ ರೀತಿ ದೂರುದಾರರು ಎಲ್ಲಾ 18 ಚೆಕ್‌ಗಳ ಬಗ್ಗೆ ತಮ್ಮದೇ ಆದ ವಿವರಣೆಗಳನ್ನು ಕೊಟ್ಟು ಹಣ ದುರುಪಯೋಗವಾಗಿದೆ ಅಂತ ಪ್ರತ್ಯುತ್ತರ ಸಲ್ಲಿಸಿದ್ದಾರೆ.

ಈ ಪ್ರಕರಣದ ದೂರುದಾರರು ಆಪಾದಿಸುತ್ತಿರುವ 18 ಚೆಕ್ ಸಂಖ್ಯೆಗಳನ್ನು ನಮೂದಿಸಿ ಇವುಗಳಲ್ಲಿ ಹಣ ದುರುಪಯೋಗವಾಗಿದೆ ಎನ್ನಲು ತನ್ನದೇ ಆದ ವಿವರಣಗಳನ್ನು ಕೊಟ್ಟಿದ್ದು ಇದರಲ್ಲಿ ಹೆಚ್ಚಿನ ಸಂಖ್ಯೆ ಚೆಕ್‌ಗಳನ್ನು ಪುಟ್ಟೇಗೌಡ ಅಟೆಂಡರ್ ಇವರಿಗೆ ಮತ್ತು ಕುಮಾರ್.ಸಿ ಎನ್ನುವವರಿಗೆ ಕೊಡಲಾಗಿದೆ. ಈ ಚೆಕ್‌ಗಳ ಬಗ್ಗೆ ತನಿಖೆ ಮಾಡಿಸಬೇಕಾಗಿದ್ದರಿಂದ .ಗೌರವಾನ್ವಿತರ ಆದೇಶದಂತೆ ಈ ಪ್ರಕರಣದ ಸಂಪೂರ್ಣ ತನಿಖೆಯನ್ನು ಮಾಡಿ ನಿರ್ದಿಷ್ಟವಾದ ಅಭಿಪ್ರಾಯದಲ್ಲಿ ವರದಿಯನ್ನು ಸಲ್ಲಿಸುವಂತೆ ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಹಾಸನ ಇವರಿಗೆ ವಹಿಸಲಾಗಿತ್ತು.

ಅದರಂತೆ ಪೋಲೀಸ್ ಅಧೀಕ್ಷಕರು ಕರ್ನಾಟಕ ಲೋಕಾಯುಕ್ತ ಹಾಸನ ಇವರು ತನಿಖೆಯನ್ನು ಮಾಡಿ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ 18 ಚೆಕ್‌ಗಳನ್ನು ಎದುರುದಾರರು ತಮ್ಮ ಕಛೇರಿಯ ಸಿಬ್ಬಂದಿಗಳಾದ ಶ್ರೀ.ಕುಮಾರ ಮತ್ತು ಶ್ರೀ.ಪುಟ್ಟೇಗೌಡ ಇವರ ಹೆಸರಿಗೆ ನೀಡಿ ಹಣವನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ. ಸದರಿ ವಿವಾದಿತ ಚೆಕ್‌ಗಳನ್ನು ನಿಯಮಾನುಸಾರ ವಿತರಣೆ ಮಾಡಿರುವುದು ಕಂಡು ಬಂದಿರುವುದಿಲ್ಲ ಅಂತ ಅಭಿಪ್ರಾಯಪಟ್ಟಿದ್ದರೂ ಸಹ, ಮುಂದುವರೆದು ತಮ್ಮ ವರದಿಯಲ್ಲಿ ಆಡಿಟ್‌ನಲ್ಲಿ ಯಾವುದೇ ಆಕ್ಷೇಪಣೆಗಳು ಆಗಿಲ್ಲ. ಆದ್ದರಿಂದ, ಹಣ ದುರುಪಯೋಗವಾಗಿರುವುದು ಸಾಬೀತಾಗಿಲ್ಲ ಅಂತ ಅಭಿಪ್ರಾಯಪಟ್ಟಿರುತ್ತಾರೆ.

ತನಿಖಾ ವರದಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದೆ.

ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಚೆಕ್‌ನ ಮುಖಾಂತರ ಹಣ ಡ್ರಾ ಮಾಡಿರುವುದು ಸರಿಯೇ? ಎನ್ನುವ ಬಗ್ಗೆ ನಿರ್ದಿಷ್ಟವಾದ ಅಭಿಪ್ರಾಯಕ್ಕೆ ಬರುವಂತೆ ಕೋರಿಕೊಂಡಿರುತ್ತಾರೆ. ಇದರೊಂದಿಗೆ ಒಂದು ದಿನ ಪತ್ರಿಕೆ, ಪೇಪರ್ ಕಟಿಂಗ್‌ಅನ್ನು ಸಲ್ಲಿಸಿದ್ದಾರೆ.

ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಕರ್ನಾಟಕ ಪಂಚಾಯತ್ (ಗ್ರಾಮ ಪಂಚಾಯತ್ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು -2006 ದಿನಾಂಕ:18.01.2016ರಿಂದ ಜಾರಿಗೆ ಬಂದಿದ್ದು, ಬಿಲ್ಲುಗಳ ಪಾವತಿಯನ್ನು ಹೇಗೆ ಮಾಡಬೇಕು ಎನ್ನುವ ಬಗ್ಗೆ ಪ್ರತ್ಯೇಕ ನಿಯಮಗಳಿದ್ದು, ನಿಯಮ 49ರಲ್ಲಿ ಚೆಕ್‌ಗಳ ಮೂಲಕ ಹಣ ಪಡೆಯುವ ವಿಧಾನವನ್ನು ವಿವರಿಸುತ್ತಾ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳ ಸಹಿಯ ನಂತರ ಗ್ರಾಮ ಪಂಚಾಯತ್ ನಿಧಿಯಿಂದ ಚೆಕ್ ಮೂಲಕವೇ ಹಣವನ್ನು ಪಡೆದುಕೊಳ್ಳಬೇಕೇ ಹೊರತು ನೇರವಾಗಿ ನಿಧಿಯಿಂದ ಹಣವನ್ನು ಪಾವತಿಸುವಂತಿಲ್ಲ. ಗುತ್ತಿಗೆ ದಾರರಿಗೆ, ಸರಬರಾಜುದಾರರಿಗೆ ಮತ್ತು ಇತರರಿಗೆ ಸಂದಾಯ ಮಾಡಬೇಕಾದ ಪಾವತಿಯನ್ನು ಅವರ ಹೆಸರಿನಲ್ಲಿ ಅಕೌಂಟ್ ಪೇ ಚೆಕ್ ಮುಖಾಂತರವೇ ನೀಡತಕ್ಕದ್ದು. ರೂ.50/- ಗಳಿಗಿಂತ ಕಡಿಮೆ ಹಣವನ್ನು ಪಾವತಿಸಬೇಕಾದ ಸಂದರ್ಭದಲ್ಲಿ ಮಾತ್ರ ನಗದಾಗಿ ಪಾವತಿಸತಕ್ಕದ್ದು. ಕಛೇರಿಯ ಖಾಯಂ ಮುಂಗಡದಿಂದ ಪಾವತಿಸಿದ ಹಣವನ್ನು ಬ್ಯಾಂಕ್‌ನಿಂದ ಸ್ವಂತಕ್ಕೆ ಚೆಕ್ ನೀಡಿ ಹಣವನ್ನು ಪಡೆದುಕೊಂಡು ಮತ್ತೆ ಕಾಯಂ ಮುಂಗಡಕ್ಕೆ ಸೇರಿಸತಕ್ಕದ್ದು. ನಮೂನೆ-21 ರಲ್ಲಿ ಚೆಕ್ ನೀಡಿಕೆ ರಿಜಿಸ್ಟರನ್ನು ನಿರ್ವಹಿಸತಕ್ಕದ್ದು ಅಂತ ಸ್ಪಷ್ಟವಾಗಿ ವಿಧಿಸಲಾಗಿದೆ.

ಈ ಪ್ರಕರಣದ ತನಿಖಾಧಿಕಾರಿಗಳು ತಮ್ಮ ವರದಿಯನ್ನು ನಿಯಮ-49ನ್ನು ಉಲ್ಲೇಖಿಸಿಲ್ಲ ಮತ್ತು ಅದರ ಬಗ್ಗೆ ಯಾವುದೇ ವಿಚಾರಣೆ ಮಾಡಿಲ್ಲ. ಆದರೆ ಎದುರುದಾರರು ನಿಯಮಾನುಸಾರ ಚೆಕ್‌ಗಳನ್ನು ವಿತರಣೆ ಮಾಡಿರುವುದು ಕಂಡುಬಂದಿರುವುದಿಲ್ಲ ಅಂತ ಅಭಿಪ್ರಾಯಪಟ್ಟಿರುತ್ತಾರೆ. ಆದ್ದರಿಂದ ತನಿಖಾಧಿಕಾರಿಗಳ ಉಳಿದ ಅಭಿಪ್ರಾಯವನ್ನು ತಿರಸ್ಕರಿಸಲಾಗಿದೆ.

ಈ ಪ್ರಕರಣದ ಎದುರುದಾರರು ವಿವಿಧ ಸಾಮಗ್ರಿಗಳನ್ನು ಖರೀದಿಸಿದ ಬಾಬ್ತು ಸರಬರಾಜುದಾರರಿಗೆ ನೇರವಾಗಿ ಅಕೌಂಟ್ ಪೇ ಚೆಕ್‌ಗಳನ್ನು ಕೊಡದೆ ಕರ್ನಾಟಕ ಪಂಚಾಯತ್ (ಗ್ರಾಮ ಪಂಚಾಯತ್ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು-2006ರ ನಿಯಮ-49ರನ್ನು ಉಲಂಗಿಸಿ ಕರ್ತವ್ಯಲೋಪ ಎಸಗಿದ್ದಾರೆ ಎನ್ನುವ ಬಗ್ಗೆ ಸಾಕಷ್ಟು ಆಧಾರಗಳಿವೆ ಹಾಗೂ ಎದುರುದಾರರು ತಮ್ಮ ಕಛೇರಿಯ ಸಿಬ್ಬಂಧಿಗಳ ಹೆಸರಿನಲ್ಲಿ ಚೆಕ್‌ನ್ನು ನೀಡಿ ಹಣವನ್ನು ಡ್ರಾ ಮಾಡಿ ಸದರಿ ನಿಯಮ – 49ನ್ನು ಉಲ್ಲಂಗಿಸಿ ಕರ್ತವ್ಯಲೋಪ ಎಸಗಿದ್ದಾರೆ.

ಎದುರುದಾರರಾದ ಶ್ರೀ ಸತೀಶ ಕೆ.ಜೆ., ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ಈ ಹಗರಣದಲ್ಲಿ ಭಾಗಿಯಾಗಿದ್ದು, ಅಧಿಕಾರ ದುರುಪಯೋಗ ಪಡಿಸಿಕೊಂಡಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಶ್ರೀ ಸತೀಶ ಕೆ.ಜೆ., ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಜುಟ್ಟನಹಳ್ಳಿ ಗ್ರಾಮ ಪಂಚಾಯಿತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ ಇವರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(i)(ii) ಮತ್ತು (iii) ರಂತೆ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು, ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿರ್ಭಂಧ, ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರಡಿಯಲ್ಲಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ವಹಿಸಬೇಕೆಂದು ಕೋರಿರುತ್ತಾರೆ.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಸತೀಶ ಕೆ.ಜೆ., ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಜುಟ್ಟನಹಳ್ಳಿ ಗ್ರಾಮ ಪಂಚಾಯಿತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ ಇವರು ಕರ್ನಾಟಕ ನಾಗರೀಕ ಸೇವಾ (ನಡವಳಿ) ನಿಯಮ 1966 3(i)(ii) ಮತ್ತು (iii)ರನ್ವಯ "ದುರ್ನಡತೆ" ಎಸಗಿರುವುದು ಸಾಬೀತಾಗಿರುವುದರಿಂದ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಈ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14(ಎ) ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತ ರವರಿಗೆ ವಹಿಸಲು ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರು ರವರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/40/ಗ್ರಾಪಂಕಾ/2018 ಬೆಂಗಳೂರು, ದಿನಾಂಕ: 09-02-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಸತೀಶ ಕೆ.ಜೆ., ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಜುಟ್ಟನಹಳ್ಳಿ ಗ್ರಾಮ ಪಂಚಾಯಿತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ ಇವರು ಕರ್ನಾಟಕ ನಾಗರೀಕ ಸೇವಾ (ನಡವಳಿ) ನಿಯಮ 1966 3(i)(ii) ಮತ್ತು (iii) ರನ್ವಯ "ದುರ್ನಡತೆ" ಎಸಗಿರುವುದು ಸಾಬೀತಾಗಿರುವುದರಿಂದ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಈ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14(ಎ) ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತ ರವರಿಗೆ ವಹಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

9/7/18

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.( ಪುಟ ಸಂಖ್ಯೆ 1 ರಿಂದ 508 ಮೂಲ ಪ್ರತಿಯನ್ನು ಲಗತ್ತಿಸಿದೆ)
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಹಾಸನ ಜಿಲ್ಲೆ.
5) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ,
6) ಶ್ರೀ ಸತೀಶ ಕೆ.ಜೆ., ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಜುಟ್ಟನಹಳ್ಳಿ ಗ್ರಾಮ ಪಂಚಾಯಿತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ.
7) ಗಣಕ ಶಾಖೆ.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.